# ಸ್ಮಶಾನವಾದರೂ ಒಂದೇ ಇರಲಿ!

ಇದೇನು ಬಹಳ ಹಿಂದಿನ ಸುದ್ದಿಯಲ್ಲ. 2013 ರ ನವೆಂಬರ್ 26 ರಂದು ಘಟಿಸಿದ್ದು. ಮಹಾರಾಷ್ಟ್ರದ ಬೀಡ್ ಜಿಲ್ಲೆಯ ತೋಳೆ ಎಂಬ ಗ್ರಾಮದಲ್ಲಿ ದಲಿತರಿಗಾಗಿ ನಿಗದಿತವಾಗಿದ್ದ ಸ್ಮಶಾನದ ಜಾಗವನ್ನು ಮೇಲ್ಜಾತಿ ಜನರು ಒತ್ತುವರಿ ಮಾಡಿಕೊಂಡಿದ್ದರು. ಸಾವಿನಲ್ಲೂ ಅವಕಾಶವಂಚಿತವಾದ ಶವಗಳನ್ನು ಹೊಲಗಳಲ್ಲಿ, ಇಲ್ಲದವರು ಪಾಳುನೆಲದಲ್ಲಿ ಹೂಳುತ್ತಿದ್ದರು. ಒಮ್ಮೆ ವೃದ್ಧ ದಲಿತನೊಬ್ಬ ಸಾವನ್ನಪ್ಪಿದ. ಇದಕ್ಕೇನಾದರೂ ಪರಿಹಾರ ಕಂಡುಕೊಳ್ಳಬೇಕೆಂದು ಸುಮಾರು 500 ಜನ ದಲಿತರು ಜಿಲ್ಲಾಧಿಕಾರಿಗಳ ಕಚೇರಿಗೆ ಶವದ ಸಮೇತ ಮೆರವಣಿಗೆ ಹೋಗಿ ಸಮಸ್ಯೆಯನ್ನು ಬಗೆಹರಿಸಲು ಮೊರೆ ಇಟ್ಟರು. ಮೊದಲಿಗೆ ಅವರನ್ನು ಕೇಳಿಸಿಕೊಳ್ಳಲೂ ಹಿಂಜರಿದ ಅಧಿಕಾರಿ ಯಾವಾಗ ಗುಂಪು ಕಚೇರಿ ಆವರಣದಲ್ಲಿಯೇ ಹೆಣ ಹೂಳಲು ಮುಂದಾಯಿತೊ, ಸಮಸ್ಯೆಯ ಗಂಭೀರತೆಯನ್ನು ಅರಿತು ಕೂಡಲೇ ತಹಸೀಲ್ದಾರ್ ಕರೆಸಿ ಹಳ್ಳಿಯ ಕಡತಗಳನ್ನು ತರಿಸಿ ಸ್ಮಶಾನದ ಜಾಗ ತೋರಿಸಿದರು. ಸಾವಿಗಾಗಿ ಸುರಿಸುತ್ತಿದ್ದ ಬಂಧುಗಳ ದುಃಖದ ಕಣ್ಣೀರು ಸಂತಸದ ಕಣ್ಣೀರಾಗಿ ಬದಲಾಯಿತು. ಕಾರಣ, ಅಂದು ಹಲವಾರು ವರ್ಷಗಳಿಂದ ಕಾಡುತ್ತಿದ್ದ ಸಮಸ್ಯೆಯೊಂದಕ್ಕೆ ಪರಿಹಾರ ದೊರಕಿತ್ತು.

ಮಾಲೆಗಾಂವ್‌ನಲ್ಲಿ ನಡೆದ ಕಥೆಯೇ ಬೇರೆ. ರಾಮಚಂದ್ರ ವಾಗ್ಮೋರೆ ಎಂಬ ದಲಿತ ತೀರಿಕೊಂಡರು. ಸ್ಮಶಾನದೆಡೆಗೆ ಶವದ ಮೆರವಣಿಗೆ ಸಾಗುತ್ತಿತ್ತು. ಸ್ಥಳೀಯ ದೇವಾಲಯದ ಪೂಜಾರಿಗಳೂ ಸೇರಿದಂತೆ ಸವರ್ಣೀಯರು ಮೆರವಣಿಗೆಯನ್ನು ತಡೆದು ಹಲ್ಲೆ ನಡೆಸಿದರು. ಶವವನ್ನು ವಾಪಸ್ ಮನೆಗೆ ತರಲಾಯಿತು. ಎರಡು ದಿನಗಳ ನಂತರ ಶವ ಕೊಳೆಯಲಾರಂಭಿಸಿ ದುರ್ವಾಸನೆ ಹರಡಿದಾಗ ರಸ್ತೆಬದಿಯಲ್ಲಿಯೇ ಹೂತು ಶವ ಸಂಸ್ಕಾರ ಮಾಡಿದರು. ಮಗಳು ಊರ್ಮಿಳಾ ಪೊಲೀಸರಿಗೆ ದೂರು ನೀಡಿ ಎಫ್‌ಐಆರ್ ದಾಖಲಾಗುತ್ತಿದ್ದಂತೆಯೇ ವಾಗ್ಮೋರೆ ಮನೆ ಸುಟ್ಟು ಕರಕಲಾಯಿತು. ತಾಯಿ ಸುಟ್ಟ ಗಾಯಗಳಿಂದ ನೊಂದು ಬದುಕುಳಿದಳು. ಆರೋಪಿಗಳಿಗಿನ್ನೂ ಬಂಧನವಾಗಿಲ್ಲ. ವಾಗ್ಮೋರೆ ಕುಟುಂಬ ಇಂದಿರಾ ಆವಾಸ್ ಮನೆಗಾಗಿ ಇನ್ನೂ ಕಾಯುತ್ತಲೇ ಇದೆ.

ಅದೇ ಜಿಲ್ಲೆಯ ಇನ್ನೊಂದು ಹಳ್ಳಿಯಲ್ಲಿ ದಲಿತರ ಸಾವು ಸಂಭವಿಸಿದಾಗ ಪ್ರತಿಬಾರಿಯೂ ಶವವನ್ನು ಪಕ್ಕದಲ್ಲೇ ಇರುವ ಹೆದ್ದಾರಿಗೆ ತೆಗೆದುಕೊಂಡು ಹೋಗಿ ಧರಣಿ ಕೂರುತ್ತಾರೆ. ಟ್ರಾಫಿಕ್ ಜಾಮ್ ಉಂಟಾಗುತ್ತದೆ. ಪೊಲೀಸರು ಧಾವಿಸುತ್ತಾರೆ. ದಲಿತರಿಗಾಗಿ ಇರುವ ಸ್ಮಶಾನದಲ್ಲಿಯೇ ಸಂಸ್ಕಾರವಾಗುತ್ತದೆ. ಅಂದರೆ ದಲಿತರಿಗೆ ತಮ್ಮ ಹಕ್ಕನ್ನು ಪ್ರತಿಪಾದಿಸಲು ಪೊಲೀಸರ ನೆರವು ಬೇಕೇಬೇಕು!

ಪೆರಿಯಾರ್ ಬದುಕಿದ, ಸಮಾನತೆಗಾಗಿ ಹೋರಾಟ ನಡೆಸಿದ ತಮಿಳುನಾಡಿನಲ್ಲಿಯೂ ಶೇ. 75 ರಷ್ಟು ಹಳ್ಳಿಗಳಲ್ಲಿ ದಲಿತರಿಗೆ ಸ್ಮಶಾನವಿಲ್ಲ. ಸಾಮಾನ್ಯರ ಸ್ಮಶಾನದಲ್ಲಿ ಪ್ರವೇಶವಿಲ್ಲ. 2008–9 ರಲ್ಲಿಯೇ ಮದ್ರಾಸ್ ಉಚ್ಚ ನ್ಯಾಯಾಲಯವು ಪ್ರತಿ ಹಳ್ಳಿಯಲ್ಲೂ ಎಲ್ಲರಿಗೂ ಒಂದೇ ಆದ ಸಾಮಾನ್ಯ ಸ್ಮಶಾನವಿರಬೇಕೆಂದು ತೀರ್ಪು ನೀಡಿದೆ. ಅದಿನ್ನೂ ಕಾರ್ಯಗತವಾಗಿಲ್ಲ.

ಭಾರತದ ಒಳಗೆ ಉದಿಸಿದ ಬೌದ್ಧ, ಜೈನ ಮತ್ತು ಸಿಖ್ ಧರ್ಮಗಳು ವರ್ಣಾಶ್ರಮ, ಜಾತಿ ಪದ್ಧತಿ ಮುಂತಾದ ಅವೈಜ್ಞಾನಿಕ, ಅಸಮಾನತೆಯನ್ನು ಪೋಷಿಸುವ ಚಿಂತನೆಗಳನ್ನು ವಿರೋಧಿಸಿಯೇ ಒಡಮೂಡಿದಂಥವು. ಸಮಾನತೆಯೇ ಅವುಗಳ ಮೂಲ ಧೋರಣೆ. ಪಂಜಾಬಿನ ಸಿಖ್ ಜನಸಂಖ್ಯೆಯಲ್ಲಿ ಶೇ.30 ರಷ್ಟು ದಲಿತರಿದ್ದಾರೆ (ಮಜಬಿ ಮತ್ತು ರಾಮದಾಸಿಯಾ). ವಿಪರ್ಯಾಸವೆಂದರೆ ಅಲ್ಲಿಯೂ ಸಮಾನತೆಯನ್ನು ಸಾಧಿಸಲಾಗಿಲ್ಲ. ಅವರಿಗೆಂದೇ ಡೇರಾಗಳನ್ನು ರಚಿಸಿಕೊಂಡು ದಲಿತರು ಬೇರೆ ಗುರುದ್ವಾರಗಳನ್ನು ನಿರ್ಮಿಸಿಕೊಂಡಿದ್ದಾರೆ. ಬಿಡುಗಡೆಯ ಧರ್ಮ, ಕ್ರಾಂತಿಕಾರಕ ಧರ್ಮ ಎಂದು ಕರೆಸಿಕೊಳ್ಳುವ ಸಿಖ್ ಧರ್ಮದ ಸ್ಥಿತಿ ಇದು.

ಈ ಸಮಸ್ಯೆ ಕೆಲವು ರಾಜ್ಯಗಳದ್ದು ಮಾತ್ರವಲ್ಲ, ಭಾರತವೆಂಬ ದೇಶವ್ಯಾಪಿ ಸಮಸ್ಯೆ. ಇದು ಜಾತಿ ಪದ್ಧತಿಯ ಕೊಡುಗೆ, ಅಸ್ಪೃಶ್ಯತೆಯ ಅಸಹ್ಯಕರ ಮುಖ. ಎಂದಾದರೊಂದು ದಿನ ತಾವೂ ಅದೇ ಆಗಬೇಕಾದ ಹೆಣವೆಂಬ ಹೆಣವನ್ನು ಹೀಗೆ ಬೇರ್ಪಡಿಸಿ ಅವಮಾನಿಸಿ ಕಳಿಸುವುದು ಮನುಷ್ಯ ಧರ್ಮವೆನಿಸುವುದಿಲ್ಲ. ಸರ್ಕಾರಿ ಆಸ್ಪತ್ರೆಗಳು ಎಲ್ಲರಿಗೂ ಒಂದೇ ಆಗಿರುವಾಗ ಸರ್ಕಾರಿ ರುದ್ರಭೂಮಿಗಳು ಯಾಕೆ ಬೇರೆಯಾಗಿರಬೇಕು? ಅದೃಷ್ಟವಶಾತ್ ಕರ್ನಾಟಕ ಇಂತಹ ಒಂದು ಕಾನೂನನ್ನು ತರಲು ಮುಂದಾಗಿದೆ. ಹಳ್ಳಿಗಳಲ್ಲಿ ಸ್ಮಶಾನ ಎಲ್ಲರಿಗೂ ಒಂದೇ ಇರಬೇಕು ಎಂಬ ನಿಲುವಳಿ ಶಾಸನ ಸಭೆಯಲ್ಲಿ ಮಂಡನೆಯಾಗಿದೆ. ಅದಕ್ಕೆ ಸರ್ವಾನುಮತವಿದೆ. ಅಷ್ಟರಮಟ್ಟಿಗೆ ನಮ್ಮ ಪ್ರತಿನಿಧಿಗಳು ಜಾತ್ಯತೀತರು ಮತ್ತು ಅಭಿನಂದನಾರ್ಹರು. ಈ ನಿಲುವಳಿ ಸಂಸತ್ತಿನಲ್ಲಿ ಮಂಡನೆಯಾಗಬೇಕು. ದೇಶವ್ಯಾಪಿ ಶಾಸನವಾಗಿ ಜಾರಿಗೆ ಬರಬೇಕು. ಹುಟ್ಟಿಗೂ ಮುನ್ನ ಜಾತಿ ಇಲ್ಲವಾಗಿ, ಅದು ಸಾವಿನಲ್ಲೂ ಇಲ್ಲವಾಗಬೇಕು. ಬದುಕಿರುವಾಗ ಉಳಿಸಿಕೊಳ್ಳುವುದು, ಬಿಡುವುದು ಜಾತಿ ಧರ್ಮಕ್ಕೆ ಬಿಟ್ಟ ವಿಚಾರ.

■ ಮೂಚಿ

## ಮಾತೇ ಮುತ್ತು

★ ಅಜ್ಞಾನ ಎಂದಿಗೂ ಯಾವ ಪ್ರಶ್ನೆಯನ್ನೂ ಪರಿಹರಿಸುವುದಿಲ್ಲ.
-ಬೆಂಜಮಿನ್ ಡಿಸ್ರೇಲಿ

★ ಹೇಳಿದಂತೆ ನಡೆಯುವವನ ಸುಭಾಷಿತ ಸ್ವೀಕರಿಸಲು ಯೋಗ್ಯವಾದದ್ದು.
-ಧಮ್ಮಪದ

★ ನೀವು ಒಮ್ಮೆ ಮಾತ್ರ ಜೀವಿಸುತ್ತೀರಿ. ಅದನ್ನು ಸರಿಯಾಗಿ ಜೀವಿಸಿದರೆ ಒಮ್ಮೆ ಮಾತ್ರ ಸಾಕು.
-ಮಾ ವೆಸ್ಟ್

★ ನಿಮ್ಮ ಸ್ವಂತ ಕನಸುಗಳನ್ನು ಕಟ್ಟಿಕೊಳ್ಳಿ. ಇಲ್ಲವಾದಲ್ಲಿ ಬೇರೆಯವರು ತಮ್ಮ ಕನಸುಗಳನ್ನು ಕಟ್ಟಿಕೊಳ್ಳಲು ನಿಮ್ಮನ್ನು ಬಾಡಿಗೆಗೆ ಪಡೆಯುತ್ತಾರೆ.
-ಫರ್‍ರಾ ಗ್ರೇ

★ ಒಳ್ಳೆಯ ಗುಣಗಳನ್ನು ಗೌರವಿಸುವುದರಿಂದ ಮನಸ್ಸುಗಳು ಒಗ್ಗೂಡುತ್ತವೆ.
-ಅ.ನ.ಕೃ

★ ಮನನೋಯಿಸುವ ದಾನಕ್ಕಿಂತ ಒಂದು ಸವಿನುಡಿ ಮತ್ತು ಕ್ಷಮಾಗುಣವೇ ಉತ್ತಮ.
-ಖುರಾನ್

★ ಸಂತೋಷವಾಗಿದ್ದೀಯ ಎಂದರೆ ಎಲ್ಲವೂ ಪರಿಪೂರ್ಣವಾಗಿದೆ ಎಂದು ಅರ್ಥವಲ್ಲ. ಅದರ ಅರ್ಥ– ನೀವು ಅಪರಿಪೂರ್ಣ ಎಂಬುದನ್ನು ದಾಟಿ ನಿಮ್ಮನ್ನು ತೋರಿಸಿಕೊಳ್ಳುತ್ತಿದ್ದೀರಿ.
-ಅನಾಮಿಕ

★ ಜೀವನ ನಿಮಗೆ ಲಿಂಬೆಹಣ್ಣು ಕೊಟ್ಟಿದ್ದರೆ ಲಿಂಬೆರಸ ಮಾಡಿ ಕುಡಿಯಿರಿ. ಆದರೆ ಜೀವನ ವೋಡ್ಕಾ ಕೊಟ್ಟವನನ್ನು ಕಂಡುಹಿಡಿದು ಪಾರ್ಟಿ ಮಾಡಿ.
-ರಾನ್ ವೈಟ್

★ ವ್ಯಕ್ತಿಯೊಬ್ಬನ ಚಾರಿತ್ರ್ಯವನ್ನು ಪರೀಕ್ಷಿಸಬೇಕಿದ್ದರೆ ಅವನಿಗೆ ಅಧಿಕಾರ ಕೊಡಿ.
-ಅಬ್ರಹಾಂ ಲಿಂಕನ್

★ ನನಗೆ ಆಗಲ್ಲ ಎಂದು ಹೇಳಿದ ಎಲ್ಲರಿಗೂ ಧನ್ಯವಾದಗಳು. ಅವರು ಹಾಗೆ ಹೇಳಿದ್ದರಿಂದಲೇ ನಾನು ಅವನ್ನು ಸ್ವಯಂ ಪ್ರಯತ್ನದಿಂದ ಮಾಡಿದೆ.
-ಆಲ್ಬರ್ಟ್ ಐನ್‌ಸ್ಟೀನ್

★ ಮರಗಳಂತೆ ಎತ್ತರವಾಗಿ ನಡೆಯಿರಿ, ಪರ್ವತಗಳಂತೆ ದೃಢವಾಗಿ ಜೀವಿಸಿ, ವಸಂತದ ತಂಗಾಳಿಯಂತೆ ಸಭ್ಯರಾಗಿರಿ, ಬೇಸಿಗೆಯ ಬೆಚ್ಚನೆ ಹೃದಯದಲ್ಲಿರಲಿ. ಶ್ರೇಷ್ಠ ಚಿಂತನೆ ಸದಾ ನಿಮ್ಮದಾಗುತ್ತದೆ.
-ರಮಣ ಮಹರ್ಷಿ

★ ನಿಜವಾಗಿಯೂ ಸಮಸ್ಯೆಯನ್ನು ಅರ್ಥ ಮಾಡಿಕೊಂಡರೆ ಉತ್ತರ ಅದರ ಒಳಗಿಂದಲೇ ಸಿಗುತ್ತದೆ. ಏಕೆಂದರೆ ಉತ್ತರ ಸಮಸ್ಯೆಯಿಂದ ಬೇರೆಯಲ್ಲ.
-ಜಿಡ್ಡು ಕೃಷ್ಣಮೂರ್ತಿ

★ ನಿಮ್ಮ ಮುಖವನ್ನು ಸೂರ್ಯಕಿರಣಗಳತ್ತ ತೋರಿಸಿ. ಅಲ್ಲಿ ನೆರಳುಗಳು ಕಾಣುವುದಿಲ್ಲ.
-ಹೆಲೆನ್ ಕೆಲ್ಲರ್